C.C.No. 501/2018
1 PW–

ದಿನಾಂಕಃ 16.09.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ **RSM** ರವರಿಂದಃ

ನನ್ನನ್ನು 01.05.2018 ರಂದು ಅಂಕಿ ಅಂಶಗಳ ಕಣ್ಗಾವಲು ತಂಡದ ಅಧಿಕಾರಿಯಾಗಿ ನೇಮಕ ಮಾಡಲಾಗಿತ್ತು. ವಿದಾನಸಭೆ ಚುನಾವಣೆ ಮುಗಿಯುವ ವರೆಗೂ ನನ್ನನ್ನು ಹೀಗೆ ನೇಮಕ ಮಾಡಿದ್ದರು. ಇದರ ಬಗ್ಗೆ ನನ್ನ ಬಳಿ ದಾಖಲಾತಿ ಇಲ್ಲ. ನಾನು 01.05.2018 ರಂದು ನಾನು ಯಳಂದೂರಿನಲ್ಲೇ ಇದ್ದೆ. ನಾವು ಅಂದಾಜಿನ ಮೇಲೆ ಇಷ್ಟೇ ಮೀಟರ್ ಬಂಟಿಂಕ್ಸನ್ನು ಕಟ್ಟಿರುತ್ತಾರೆ ಎಂದು ಹೇಳಿರುತ್ತೇವೆ. ಮೊದಲು ಈ ಬಂಟಿಂಕ್ಸ್ ಗಳನ್ನು ಯಾರು ಕಟ್ಟಿದ್ದರು ಎಂದು ನಮಗೆ ಗೊತ್ತಿರಲಿಲ್ಲ ಆದರೆ ನಂತರ ಚಾಸಾ–1 ರವರಿಂದ ಗೊತ್ತಾಗಿರುತ್ತದೆ. ಸಂತೇಮರಹಳ್ಳಿ ಸರ್ಕಲ್‌ಯಿಂದ ಎಷ್ಟು ದೂರದ ವರೆಗೆ ಬಂಟಿಂಕ್ಸ್ ಗಳನ್ನು ಹಾಕಲಾಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಸರ್ಕಲ್‌ನಲ್ಲಿಯೇ ಬಂಟಿಂಕ್ಸ್ ಗಳನ್ನು ಹಾಕಲಾಗಿತ್ತು ಎಂದು ನುಡಿಯುತ್ತಾರೆ. ಸರ್ಕಲ್‌ನ 4 ದಿಕ್ಕುಗಳಲ್ಲೂ ಸಹ ನೇರವಾಗಿ ಬಂಟಿಂಕ್ಸ್ ಗಳನ್ನು ಹಾಕಲಾಗಿತ್ತು. ನಾನು ಹೇಳಿದ ಹಾಗೆ ಸರ್ಕಲ್‌ನಲ್ಲಿ ಬಂಟಿಂಕ್ಸ್ ಗಳನ್ನು ಹಾಕಲಾಗಿರುವುದಿಲ್ಲ ಎಂದರೆ ಸಾಕ್ಷಿಯು ಹಾಕಿರುವುದಾಗಿ ನುಡಿಯುತ್ತಾರೆ. ಒಂದೊಂದು ಬಂಟಿಂಕ್ಸ್ ಗಳು 60 ಮೀಟರ್ ಉದ್ದ ಇದ್ದವು, ಇದ ಅಗಲ ಈಗ ನನಗೆ ಸರಿಯಾಗಿ ನೆನಪಿಲ್ಲ. ಯಾವುದೇ ರೀತಿ ಬಂಟಿಂಕ್ಸ್ ಗಳನ್ನು ಹಾಕಿಲ್ಲದೇ ಇದ್ದರೂ ಸಹ ನಾನು ನಮ್ಮ ಇಲಾಖೆಯ ಅಂಕಿ ಅಂಶಗಳ ಸಲುವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನೆ ನಡೆದಿದೆ ಎನ್ನಲಾದ ದಿನದಂದು ಯಳಂದೂರಿನಲ್ಲೆ ಇದ್ದು ಸಂತೇಮರಹಳ್ಳಿ ವೃತ್ತಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋಗಿದ್ದರೆ ಅಲ್ಲಿ ಕಟ್ಟಿತ್ತು ಎನ್ನಲಾದ ಬಂಟಿಂಕ್ಸ್ ಗಳನ್ನು ಜಪ್ತುಪಡಿಸಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

17.09.2022.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.